ವಾರದ ಪತ್ರ

## ಗಟ್ಟಿಕಥೆ ಬರಲಿ

ಸ್ಟಾರ್ ಸುವರ್ಣದ 'ಮುದ್ದು ಲಕ್ಷ್ಮಿ', 'ಸಂಘರ್ಷ', 'ರುಕ್ಕು', 'ಜೀವ ಹೂವಾಗಿದೆ' ಧಾರಾವಾಹಿಗಳಲ್ಲಿ ಒಂದು ಗಂಡಿಗೆ ಎರಡು ಹೆಣ್ಣು ಪ್ರೇಮಿಸುವ ಕಥೆಗಳು ಪ್ರಸಾರವಾಗುತ್ತವೆ ಇಂಥ ಮೂರ್ಖತನ ಧಾರಾವಾಹಿ ಕಥೆಗಳು. ಇವುಗಳನ್ನು ನೋಡಿ ಜನ ದಾರಿ ತಪ್ಪುವ ಸಂಭವ ಇರುತ್ತದೆ. ಸಾಮಾಜಿಕ–ಕೌಟುಂಬಿಕ ಮೌಲ್ಯಗಳನ್ನು ಗಟ್ಟಿಗೊಳಿಸುವ ಕಥೆಗಳು ಧಾರಾವಾಹಿಗಳಾಗಿ ಬರಲಿ. ಇದರಿಂದ ಪ್ರೇಕ್ಷಕರಿಗೆ ಒಳ್ಳೆಯ ನಡತೆ ಸಂಸ್ಕೃತಿ ತಿಳಿಸಿದಂತೆ ಆಗುತ್ತದೆ.

—ಬಿ.ಎಸ್. ಮುಳ್ಳೂರ ಹಲಗತ್ತಿ




## ಎತ್ತ ಸಾಗುತ್ತಿದ್ದಾಳೆ ರುಕ್ಕು?

ಸ್ಟಾರ್ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುವ 'ರುಕ್ಕು' ಧಾರಾವಾಹಿ ಗೊತ್ತುಗುರಿ ಇಲ್ಲದಂತೆ ಸಾಗುತ್ತಿದೆ. ಬೇಸಾಯವೇ ಬದುಕು ಎಂದು ಬಿಂಬಿತವಾಗುತ್ತಾ ಬಂದ ಮಣ್ಣಿನ ಮಗಳು ರುಕ್ಕು ಈಗ ತನ್ನ ಅಭಿರುಚಿ ಕೆಡಿಸುತ್ತಿದೆ. ಅಕ್ಕ ತಂಗಿಯರ ಒಡನಾಟ, ಹಳ್ಳಿಯ ಸೊಗಡು ಬೇಸಾಯ ಕೃಷಿ ಬದುಕನ್ನು ಉಸಿರಾಗಿಸುತ್ತ ಹಳ್ಳಿಯ ನಿರ್ಮಲ ಚಿತ್ರಣದ ಕಥೆ ಎಂದು ಕಾದು ಕುಳಿತು ನೋಡುತ್ತಿದ್ದವರಿಗೆ ಅಸಹನೀಯ ಪ್ರೇಮ ಕಥನ ಧಾರಾವಾಹಿಯಲ್ಲಿ ಸೇರಿಕೊಂಡು ಅರಗಿಸಿಕೊಳ್ಳದಂತೆ ಮಾಡಿದೆ. ಇದನ್ನು ಆದಷ್ಟು ಬೇಗ ಮುಗಿಸೋದೇ ಉತ್ತಮ.

—ಪಾರ್ವತಿ ಬೆಂಗಳೂರು

## ಕಳೆಗಟ್ಟಿದ ಥಟ್..

ಚಂದನವಾಹಿನಿಯ 'ಥಟ್ ಅಂತ ಹೇಳಿ' ಬಹುಜನಪ್ರಿಯ. ಇತ್ತೀಚೆಗೆ ಅದಕ್ಕೆ ಬಿಟ್ಟ ಅಕ್ಷರ ತುಂಬಿ ಮತ್ತು ಪದವಿನೋದ ಸೇರಿಸಲಾಗಿದೆ. ಅದು ಮತ್ತಷ್ಟು ತನ್ನ ಆಕರ್ಷಣೆಯನ್ನು ಹೆಚ್ಚಿಸಿದೆ. ಒಗಟು ಮತ್ತು ಗಾದೆಯ ಕುರಿತ ಪ್ರಶ್ನಾವಳಿಗಳು ನಮ್ಮ ಪರಂಪರೆಯನ್ನು ಪರಿಚಯಿಸುತ್ತದೆ. ಜನಪದ ಸಾಹಿತ್ಯವನ್ನು ಹೊಸ ತಲೆಮಾರಿಗೆ ದಾಟಿಸುವ ಜೊತೆಗೆ ಅದರ ಅಂತರ್ಯದೊಳಗಿನ ಅರ್ಥ ವೈವಿಧ್ಯವನ್ನೂ ಅರಿವಿಗೆ ತರುವ ಕೆಲಸ ಅಮೋಘವಾಗಿದೆ. ನಂತರದ ಲೆಕ್ಕ ಮತ್ತು ಪದಬಂಧವಂತೂ ಬುದ್ಧಿವಂತಿಕೆಯನ್ನು ಪರೀಕ್ಷಿಸುವಂತಿದೆ.

—ಕೆ.ಎಸ್. ಪ್ರಭಾಕರ ಗುಪ್ತ ಹಾಸನ

## ಗಣೇಶನ ಮದುವೆ ಆದೀತು

ಹೀಗೊಂದು ಸಂದೇಹ ಕಲರ್ಸ್ ಕನ್ನಡದ 'ಮಂಗಳಗೌರಿ ಮದುವೆ' ಧಾರಾವಾಹಿ ವೀಕ್ಷಕರನ್ನು ಕಾಡುತ್ತಿದೆ. ಅಸಂಬದ್ಧ ಕಥೆ, ಹಳಿ ತಪ್ಪಿದ ನಿರ್ದೇಶನ, 'ಹ' ಕಾರ ಮತ್ತು 'ಅ' ಕಾರಗಳನ್ನು ಎಲ್ಲಿ ಮತ್ತು ಹೇಗೆ ಬಳಸಬೇಕು ಎನ್ನುವ ಪರಿವೆಯಿಲ್ಲದೆ ಮಾತನಾಡುವ ಕೆಲವು ಪಾತ್ರಗಳು, ತಲೆ ಬುಡವಿಲ್ಲದ ತಿರುವುಗಳು, ಹಿಡಿತವಿಲ್ಲದ ಕಥೆಯ ಓಟ ವೀಕ್ಷಕರು ಮಂಗಳಗೌರಿ ಮತ್ತು ಪೊಲೀಸಪ್ಪನ ತಲೆ ಮೇಲೆ ಯಾವಾಗ ಮೂರಕ್ಷತೆ ಬೀಳಬಹುದು ಎಂದು ಕಾತುರದಿಂದ ಕಾಯುತ್ತಿದ್ದಾರೆ. ಗಣೇಶನ ಮದುವೆಯಾದರೂ ಆಗಬಹುದು. ಆದರೆ ಮಂಗಳಗೌರಿಗೆ ಸಪ್ತಪದಿ ಭಾಗ್ಯ ಇಲ್ಲ ಎಂದು ವೀಕ್ಷಕರು ಚಟಾಕಿ ಹಾರಿಸುವಂತಾಗಿದೆ.

—ರಮಾನಂದ ಶರ್ಮಾ, ಬೆಂಗಳೂರು

## ಪರಿಸ್ಥಿತಿ... ಕೈ ಮೀರುವ ಮುನ್ನ

ಕೊರೊನ ಕರಾಳ ದಿನಗಳ ದೀರ್ಘ ಕಾಲದ ನಂತರ ನಿರೀಕ್ಷಿತ ಕೆಲವು ಸಿನಿಮಾಗಳು ಬಿಡುಗಡೆಯಾದವು. ಬಹುದಿನಗಳ ನಂತರ ತಮ್ಮ ನೆಚ್ಚಿನ ನಟನ ಮತ್ತು ಚಿತ್ರದ ಬಗ್ಗೆ ಅಭಿಮಾನಿಗಳು ತೋರಿದ ಕಾತುರ ಮತ್ತು ಉತ್ಸಾಹ ಸಹಜವೇ ಆದರೆ ನಾವೇನು ಕಡಿಮೆ ಅಂತಾ ನಮ್ಮ ಖಾಸಗೀ ಸುದ್ದಿ ವಾಹಿನಿಗಳು ಪೈಪೋಟಿಗೆ ಬಿದ್ದವರಂತೆ ಬಿಡುಗಡೆಯಾದ ಸಿನಿಮಾ ಬಗ್ಗೆ ತಮ್ಮ ಮಾಮೂಲಿ ಶೈಲಿಯ 'ಫುಲ್ ಫಿದಾ ಮತ್ತು ಖುಷ್' ಆಗಿ ದಿನಗಟ್ಟಲೇ ಪ್ರಸಾರ ಮಾಡಿಯೇ ಬಿಟ್ಟರು.

'ಬಾಕ್ಸ್ ಆಫೀಸ್ ಪರಿಣಿತರಿಗಿಂತಲೂ ಹೆಚ್ಚಾಗಿ' ಇದುವರೆಗೆ ಬಿಡುಗಡೆಯಾದ ಎಲ್ಲ ಸಿನಿಮಾಗಳ ಇತಿಹಾಸವನ್ನೇ 'ಉಡೀಸ್ / ಚಿಂದಿ ಚಿಂದಿ' ಎಂದು ಸಿನಿಮಾವನ್ನು ಬಿಂಬಿಸಿದರು. ಈ ನಡುವೆ ಅಪ್ಪಿ ತಪ್ಪಿ ಕೊರೊನಾ ಸಂದರ್ಭದಲ್ಲಿ, ಪ್ರೇಕ್ಷಕರು ಚಿತ್ರ ಮಂದಿರದ ಹೊರ / ಒಳಗೆ ತೆಗೆದುಕೊಳ್ಳಲೇ ಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಮೈಮರೆತೇ ಬಿಟ್ಟಿದ್ದರು. ಈಗ ಕೇವಲ ಒಂದು ವಾರದಲ್ಲಿ ಕೋರೋನಾ ಸೋಂಕು ದ್ವಿಗುಣ ಗೊಂಡಿದೆ. ಪರಿಸ್ಥಿತಿ ಕೈ ಮೀರುವ ಮುನ್ನ ಅನವಶ್ಯಕ ಸುದ್ದಿಗಳನ್ನು ವೈಭವೀಕರಿಸಿ ಪ್ರಸಾರ ಮಾಡುವುದನ್ನುಬಿಟ್ಟು, ನಮ್ಮ ಸುದ್ದಿವಾಹಿನಿಗಳು ಈ ನಿಟ್ಟಿನಲ್ಲಿ ಮಹತ್ವದ ಸಾಮಾಜಿಕ ಮತ್ತು ಮಾಧ್ಯಮದ ಜವಾಬ್ದಾರಿಯನ್ನು ಮೆರೆಯಬೇಕು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಮೊಟ್ಟೆ ಬಳಸಬಾರದಿತ್ತು

ಕಲರ್ಸ್ ಕನ್ನಡದ 'ಬಿಗ್ ಬಾಸ್'ನಲ್ಲಿ ಸ್ಪರ್ಧಿಗಳಿಗೆ ಅನೇಕ ಆಟಗಳನ್ನು ಆಡಿಸುತ್ತಾರೆ. ಅದರಲ್ಲಿ ಮೇಲಿಂದ ಬೀಳುವ ಮೊಟ್ಟೆಯನ್ನು ಹಿಡಿಯಬೇಕು. ಮೊಟ್ಟೆ ಕೆಳಗೆ ಬಿದ್ದರೆ ಔಟ್ ಎಂದು ತಿಳಿಸಿದ್ದರು. ಮೊಟ್ಟೆ ಪೋಷಕಾಂಶಯುಕ್ತ ಆಹಾರ ಪದಾರ್ಥ.

ಮೊಟ್ಟೆ ಸ್ಪರ್ದಿಗಳ ಹಿಡಿತ ತಪ್ಪಿ ಅವರ ಕಾಲಡಿ ಸೇರಿದ್ದವು. ಆ ದೃಶ್ಯ ನೋಡಿದರೆ ಬೇಸರ ಅನ್ನಿಸುತ್ತಿತ್ತು. ಚಟುವಟಿಕೆಯಲ್ಲಿ ಮೊಟ್ಟೆ ಎಸೆಯುವ ಬದಲು ಬೇರೆ ಆಟದ ಪರಿಕರ ಇಲ್ಲವೇ ತರಕಾರಿಯನ್ನು ಬಳಸಬಹುದಿತ್ತು. ಬೀಟ್ ರೂಟ್, ಆಲೂಗಡ್ಡೆ, ಗುಂಡು ಬದನೆ ಎಸೆದು ಹಿಡಿಯದೆ ಕೆಳಗೆ ಬಿದ್ದರೆ ಔಟ್ ಎಂದು ಹೇಳಬಹುದಿತ್ತು. ಪುನಃ ತರಕಾರಿಗಳನ್ನು ತೊಳೆದು ಅಡುಗೆಗೆ ಬಳಸ ಬಹುದಿತ್ತು. ಏಕೆ ಈ ತರಹದ ಯೋಚನೆಯನ್ನು ಬಿಗ್ ಬಾಸ್ ಮಾಡಲಿಲ್ಲ. ತಿನ್ನುವ ಆಹಾರ ವ್ಯರ್ಥ ಮಾಡಬಾರದು ಎನ್ನುವ ಸಂದೇಶ ನೀಡಬೇಕಾದ ಮಾಧ್ಯಮ ಮೋಜಿನ ಆಟದ ನೆಪದಲ್ಲಿ ಹಾಳು ಮಾಡಿದ್ದು ಬೇಸರ ಅನಿಸಿತು.

ಆಟ ಆಡುವ ಸಮಯ ಮಧ್ಯರಾತ್ರಿಗೂ ಮೀರಿರುತ್ತದೆ. ಬೆಳಿಗ್ಗೆ ತಡವಾಗಿ ಏಳುತ್ತಾರೆ ಶಿಸ್ತು ಇರುವುದಿಲ್ಲ. ಆದ್ದರಿಂದ ಬೆಳಿಗ್ಗೆ ಏಳುವ ಸಮಯ ಹಾಗೂ ಆಟದ ಸಮಯದಲ್ಲಿ ಶಿಸ್ತು ಇರಲಿ.

—ಎಂ.ಎಸ್. ಉಷಾ ಪ್ರಕಾಶ್ ಮೈಸೂರು